NO. BDA/EM/EO1/TA2/CC/T-392/2013-14 Date: 28-02-2014

1-3-14

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು

ಅನುಸೂಚಿ-7

(ಉಪವಿಧಿ ಸಂಖ್ಯೆ: 5.3)

## ಪ್ರಾರಂಭಿಕ ಪ್ರಮಾಣ ಪತ್ರ

ಇವರಿಗೆ,

**M/s Gopalan Enterprises**
**(Promoters Builders & Architects),**
**No. 5, Richmond Road,**
**Bangalore-560025.**

ಮಾನ್ಯರೆ,

**ವಿಷಯ:** ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕುಂಬಳಗೋಡು ಗ್ರಾಮದ ಸರ್ವೆ ನಂ. 30/4, 31/1(P) & 32/(P) ರಲ್ಲಿ ನಿರ್ಮಿಸುತ್ತಿರುವ ಬಹುವಸತಿ ಸಮುಚ್ಛಯ ಕಟ್ಟಡಕ್ಕೆ ಕಾಮಗಾರಿ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಕುರಿತು.

**ಉಲ್ಲೇಖ:**- 1. ನಿಮ್ಮ ಅರ್ಜಿ ದಿನಾಂಕ: 28-01-2014.

2. ಮಾನ್ಯ ಆಯುಕ್ತರ ಆದೇಶ ಸಂಖ್ಯೆ: 7836, ದಿನಾಂಕ: 21-02-2014.

*****

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕುಂಬಳಗೋಡು ಗ್ರಾಮದ ಸರ್ವೆ ನಂ. 30/4, 31/1(P) & 32(P) ರಲ್ಲಿ ನಿರ್ಮಿಸುತ್ತಿರುವ **BF+GF+13UF** ಅಂತಸ್ತುಗಳನ್ನು ಹೊಂದಿರುವ **Block- A, B, C, D, E, F, G, H & I** ಗಳಲ್ಲಿನ 1344 ವಸತಿ ಘಟಕಗಳನ್ನೊಳಗೊಂಡ ಬಹುವಸತಿ ಕಟ್ಟಡದ ನಕ್ಷೆಗೆ ಸಂಖ್ಯೆ ಬೆಂಅಪ್ರಾ/ನಮ/ಅಸ/ಅಅ-1/ತಾಸ-2/ದ/3/2013-14, ದಿನಾಂಕ: 15-04-2013 ರಲ್ಲಿ ನಕ್ಷೆ ಮಂಜೂರಾತಿ ನೀಡಿದ್ದು, ಯೋಜನೆಯ ಸ್ಥಳವನ್ನು ಕಾರ್ಯಪಾಲಕ ಅಭಿಯಂತರರು (ದಕ್ಷಿಣ) ರವರು ದಿನಾಂಕ: 03-02-2014 ರಂದು ಪರಿವೀಕ್ಷಣೆ ನಡೆಸಿ ಅಡಿಪಾಯ ಗುರುತಿಸಿದ ಬಗ್ಗೆ ನೀಡಿದ ವರದಿಯಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಆಯುಕ್ತರು ಆದೇಶ ಸಂಖ್ಯೆ : 7836, ದಿನಾಂಕ: 21-02-2014 ರಂದು ಕಾಮಗಾರಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಅನುಮೋದನೆ ನೀಡಿರುತ್ತಾರೆ, ಈ ಆದೇಶದಂತೆ ಈ ಕೆಳಗಿನ ಷರತ್ತುಗಳಗೊಳಪಟ್ಟು, **BF+GF+13UF** ಅಂತಸ್ತುಗಳನ್ನು ಹೊಂದಿರುವ **Block- B, H & I** ರಲ್ಲಿಯ **336** ವಸತಿ ಘಟಕಗಳನ್ನೊಳಗೊಂಡ ಬಹುವಸತಿ ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಲು ಈ ಮೂಲಕ ಅನುಮತಿ ನೀಡಲಾಗಿದೆ.

## ಷರತ್ತುಗಳು

1. ಪ್ರಾಧಿಕಾರದ ಮಂಜೂರಾದ ನಕ್ಷೆಯ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.
2. ಕಾಮಗಾರಿಯಲ್ಲಿ ಯಾವುದೇ ಮಿತಿಮೀರುವಿಕೆ, ಬದಲಾವಣೆಗಳನ್ನು ಮಾಡದೆ ಅಥವಾ ನಿಯಮ ಉಪವಿಧಿಯನ್ನು ಉಲ್ಲಂಘಿಸದಂತೆ ಮಂಜೂರಾದ ಯೋಜನೆಯ ನಕ್ಷೆಯ ಪ್ರಕಾರ ಕಟ್ಟು ನಿಟ್ಟಾಗಿ ಕಾಮಗಾರಿಯನ್ನು ನಡೆಸತಕ್ಕದ್ದು.
3. ಕಾಮಗಾರಿಯು, ಅಡಿಪಾಯ ಅಥವಾ ಅಡಿಗಲ್ಲು, ಅಂಕಣಗಳನ್ನು ಮಾಡಿಸುವ ಕಾರ್ಯವು ಮುಕ್ತಾಯದ ಹಂತವನ್ನು ತಲುಪಿದಾಗ, ಕಾರ್ಯ ಪ್ರಗತಿಯ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸುವ ಮೂಲಕ

369

ಮಂಜೂರಾದ ನಕ್ಷೆ, ನಿಯಮಗಳು ಉಪವಿಧಿಗಳ ಮೇರೆಗೆ ನಿರ್ಮಾಣ ಕಾರ್ಯವು ನಡೆದಿರುವ ಬಗ್ಗೆ ಪರಿಶೀಲನೆ ನಡೆಸಲು ಪ್ರಾಧಿಕಾರಕ್ಕೆ ಅನುಕೂಲ ಕಲ್ಪಿಸಿ ಕೊಡುವುದು.

4. ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಬೆಂಗಳೂರು ರವರ ದಿನಾಂಕ: 04-03-2006 ರಂದು ವಿಧಿಸಿರುವ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.
5. ಅರ್ಜಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಅಥವಾ ಇನ್ನಾವುದೇ Released Materials ಗಳಿಂದಾಗಲೀ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ಬ್ಯಾರಿಕೇಡಿಂಗ್ ವ್ಯವಸ್ಥೆ ಮಾಡಿಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು. ತಪ್ಪಿದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.
6. ಅಭಿವೃದ್ಧಿದಾರರು ಯೋಜನೆ / ಕಟ್ಟಡದ ನಿರ್ಮಾಣಕ್ಕಾಗಿ ಅಗತ್ಯ ವಿನ್ಯಾಸಗಳನ್ನು ತಯಾರಿಸಿಕೊಳ್ಳಲು ಕರ್ನಾಟಕ ರಾಜ್ಯ ಸರ್ಕಾರದಿಂದ ನೊಂದಾಯಿತ Structural Engineer ರವರನ್ನು ನೇಮಿಸಿಕೊಂಡು ಕಟ್ಟಡ ನಿರ್ಮಾಣವನ್ನು ಪ್ರಸ್ತುತ ಚಾಲ್ತಿ ನಿಯಮಗಳನ್ವಯ ಎಲ್ಲಾ ತಾಂತ್ರಿಕ ಅಂಶಗಳನ್ನು ಪಾಲಿಸಿಕೊಂಡು ತಯಾರಿಸಿರುವ ಬಗ್ಗೆ ಹಾಗೂ ನಿರ್ಮಿಸುವ ಬಗ್ಗೆ Structural Engineer ರವರಿಂದ ನಮೂನೆ – 2ರಲ್ಲಿ ಪ್ರಮಾಣ ಪತ್ರವನ್ನು (Affidavit) ಅನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
7. ಕಟ್ಟಡ ನಿರ್ಮಾಣದ ಸಮಯದಲ್ಲಿ ಸೆಂಟ್ರಿಂಗ್ ಅಥವಾ ಇನ್ನಿತರೆ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದಲ್ಲಿ ಅದಕ್ಕೆ ಅರ್ಜಿದಾರರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರಾತಿ ನೀಡಿದ ಇಲಾಖೆಯು ಜವಾಬ್ದಾರರಾಗಿರುವುದಿಲ್ಲ.
8. ಅರ್ಜಿದಾರರು ಕಟ್ಟಡದಲ್ಲಿನ ವಿದ್ಯುತ್ತೀಕರಣ ಕಾಮಗಾರಿಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಏಜೆನ್ಸಿ / ಕನ್ಸಲ್ಟೆಂಟ್ ರವರಿಂದ ದೃಢೀಕರಣ ಪತ್ರವನ್ನು ಪಡೆದು ಸ್ವಾಧೀನಾನುಭವ ಪತ್ರ ಪಡೆಯುವ ಸಂದರ್ಭದಲ್ಲಿ ಪ್ರಾಧಿಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಆಯುಕ್ತರ ಪರವಾಗಿ
ಮಂಜೂರಾತಿ ನೀಡುವವರ ಸಹಿ ಮತ್ತು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಯಥಾ ಪ್ರತಿಯನ್ನು: ಕಾರ್ಯಪಾಲಕ ಅಭಿಯಂತರರು (ದಕ್ಷಿಣ) ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

368

325